ಇ) ಈ ವಿಷಯದ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

ಅ) ಹೌದು.

ಆ) ಹೌದು.

ಇ) ಬಸವಕಲ್ಯಾಣ ಸಹಾಯಕ ಆಯುಕ್ತರು ತನಿಖೆಯನ್ನು ನಡೆಸುತ್ತಿದ್ದಾರೆ.

686(878) : ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2000–03ರಲ್ಲಿ ಕೆ.ಜಿ.ಎಫ್. ನಗರಸಭೆಯ ಲೆಕ್ಕಪರಿಶೋಧನೆ ನಡೆಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಲೆಕ್ಕಪರಿಶೋಧನೆ ಆಕ್ಷೇಪಣೆಗಳ ಸ್ವರೂಪ ಮತ್ತು ಈ ಆಕ್ಷೇಪಣೆಗಳ ಮೇಲೆಕ್ಕೆಗೊಂಡ ಕ್ರಮ;

ಇ) ಈ ನಗರಸಭೆಯ ಕಳೆದ 3 ವರ್ಷಗಳ ಆಯವ್ಯಯ;

ಈ) ಸದರಿ ಆಯವ್ಯಯದಲ್ಲಿ 18% ಯೋಜನೆಯಡಿ ಕೈಗೊಂಡ ವಿವಿಧ ಕಾಮಗಾರಿಗಳಿಗೆ ಮಾಡಿರುವ ಮೆಚ್ಚಮೆಪ್ಪು;

ಉ) ಹಾಗಿದ್ದಲ್ಲಿ ಈ ಕಾಮಗಾರಿಗಳ ವಿವರ ಮತ್ತು ಖರ್ಚಾದ ಮೊತ್ತಮೆಪ್ಪು (ವಿವರಗಳನ್ನು ನೀಡುವುದು)?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

ಅ) ಹೌದು, ಇದುವರೆವಿಗೂ ಲೆಕ್ಕ ಪರಿಶೋಧನಾ ವರದಿಯು ಬಂದಿರುವುದಿಲ್ಲ.

ಆ) ಸದ್ಯಕ್ಕೆ ಉದ್ಭವಿಸುವುದಿಲ್ಲ.

ಇ) 2001-02 ರೂ. 2,67,87,122
2002-03 ರೂ. 3,28,01,270
2003-04 ರೂ. 2,95,25,853

ಈ) 2001–02 ರೂ. 12,52,649
2002–03 ರೂ. 17,14,000
2003–04 ರೂ. 4,53,427

ಉ) ಅನುಬಂಧದಲ್ಲಿ ಲಗತ್ತಿಸಿದೆ.

ಅನುಬಂಧ–1

ಕಾಮಗಾರಿಗಳ ವಿವರ

1. ಸುಸೈಪಾಳ್ಯಂನಲ್ಲಿ ಶೌಚಾಲಯ ರಿಪೇರಿ
2. ಅಶೋಕನಗರ ರಾಮಯ್ಯ ಕಾಲೋನಿಯಲ್ಲಿ ಪೈಪ್‌ಲೈನ್ ವರ್ಕ್ಸ್
3. ಸುಸೈಪಾಳ್ಯಂನಲ್ಲಿ ಚರಂಡಿ ಕಾಮಗಾರಿ
4. ಅಂಡರ್‌ಸನ್ ಪೇಟೆಯ ಆಂದ್ರಲೈನ್‌ನಲ್ಲಿ ಸಿ.ಸಿ. ರಸ್ತೆ
5. ಚಾಮರಾಜಪೇಟೆಯಲ್ಲಿ ಎಸ್.ಎಸ್.ಎಂ. ಚರಂಡಿ ಕಾಮಗಾರಿ

6. ಕಾರ್ನೇಷನ್ ಟೌನ್‌ನಲ್ಲಿ ಸಿ.ಸಿ. ರಸ್ತೆ
7. ಇರುದಿಯಾಪುರಂನಲ್ಲಿ ಸಿ.ಸಿ. ರಸ್ತೆ
8. ಪರಿಶಿಷ್ಟ ಜಾತಿಯವರಿಗೆ ಹೊಲಿಗೆ ಯಂತ್ರಗಳ ವಿತರಣೆ
9. ಊರುಗುಂಪೇಟ್‌ಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಕಾಲೋನಿಯಲ್ಲಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ
10. ಸುಸೈಪಾಳ್ಯಂನ ಪರಿಶಿಷ್ಟ ಜಾತಿ /ಪರಿಶಿಷ್ಟ ವರ್ಗದ ಕಾಲೋನಿಯಲ್ಲಿ ರಸ್ತೆ ಡಾಂಬರೀಕರಣ.
11. ಚಾಮರಾಜಪೇಟೆಯಲ್ಲಿ ರಸ್ತೆ ಡಾಂಬರೀಕರಣ.
12. ಇರುದಿಯಾಪುರಂನಲ್ಲಿ ಮೆಟಲಿಂಗ್ ರಸ್ತೆ
13. ಕೃಷ್ಣಗಿರಿಲೈನ್‌ನಲ್ಲಿ ರಸ್ತೆ ಡಾಂಬರೀಕರಣ
14. ಚಾಮರಾಜಪೇಟೆಯಲ್ಲಿ ಸಿ.ಸಿ. ರಸ್ತೆ
15. ರೋಡ್ಜರ್ಸ್ ಕ್ಯಾಂಪ್‌ನಲ್ಲಿ ಸಿ.ಸಿ. ರಸ್ತೆ
16. ಅಂಬೇಡ್ಕರ್ ನಗರದಲ್ಲಿ ಎಸ್.ಎಸ್.ಎಂ. ಚರಂಡಿ ಕಾಮಗಾರಿ
17. ಅಂಬೇಡ್ಕರ್ ನಗರದಲ್ಲಿ ಸಿ.ಸಿ. ರಸ್ತೆ
18. ಅಂಡರ್ಸನ್ ಪೇಟೆಯ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಕಾಲೋನಿಯಲ್ಲಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ
19. ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಶಾಲಾ ಮಕ್ಕಳಿಗೆ ನೋಟ್‌ಪುಸ್ತಕಗಳ ವಿತರಣೆ
20. ಶೌಚಾಲಯಗಳ ರಿಪೇರಿ.
21. ಪರಿಶಿಷ್ಟ ಜಾತಿ /ಪರಿಶಿಷ್ಟ ವರ್ಗದ ಜನರಿಗೆ ವೈದ್ಯಕೀಯ ಪರಿಹಾರ.

689(885) : ಶ್ರೀ ಎನ್.ಎಚ್. ಶಿವಶಂಕರ ರೆಡ್ಡಿ (ಗೌರಿಬಿದನೂರು) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ಪಟ್ಟಣದಲ್ಲಿ ಕೈಗಾರಿಕಾ ವಸಾಹತು ಸಂಕೀರ್ಣ ಸ್ಥಾಪನೆಯಾಗಿದ್ದು, ಇದರಲ್ಲಿ ಹಲವರಿಗೆ ನಿವೇಶನಗಳನ್ನು ಕೈಗಾರಿಕೆಗಳನ್ನು ತೆರೆಯಲು ನೀಡಲಾಗಿದ್ದು, ಸದರಿ ನಿವೇಶನಗಳನ್ನು ಬೇನಾಮಿಯಾಗಿ ಬೇರೆಯವರಿಗೆ ಮಾರಾಟ ಮಾಡಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ಕೈಗಾರಿಕೆ ತೆರೆಯಲು ಪಡೆದ ನಿವೇಶನಗಳನ್ನು ಬೇರೆಯವರಿಗೆ ಮಾರಾಟ ಮಾಡಲು ಕಾನೂನಿನಲ್ಲಿ ಅವಕಾಶವಿದೆಯೇ;

ಇ) ಇಲ್ಲದಿದ್ದಲ್ಲಿ, ಇಂತಹವರ ಬಗ್ಗೆ ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಅವಕಾಶ ಇದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಇಲ್ಲ.
ಆ) ಇದೆ.
ಇ) ಉದ್ಭವಿಸುವುದಿಲ್ಲ.